ಸರ್ಕಾರದ ಭೂಮಿಯನ್ನು ರೈತರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಗ್ಗೆ

೧೪. ಶ್ರೀ ಜಿ. ರಾಜುಗೌಡ, (ಹನೂರು).—ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಎಕರೆ ಸರ್ಕಾರದ ಭೂಮಿಯನ್ನು ರೈತರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ?

ಆ) ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟವರ್ಗದವರು ಎಷ್ಟು ಜನರಿದ್ದಾರೆ.

ಇ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೋಣನಕೆರೆಯಲ್ಲಿ ೪೦ ವರ್ಷಗಳಿಂದ ಪರಿಶಿಷ್ಟ ವರ್ಗದವರು ವ್ಯವಸಾಯ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅವರಿಗೆ ಖಾಯಂ ಆಗಿ ಜಮೀನು ಮಂಜೂರು ಮಾಡಲಾಗುವುದೇ?

ಶ್ರೀ ಅಜೀಜ್ ಸೇಠ್ (ಕಂದಾಯ ಮಂತ್ರಿಯವರು).—

ಅ ಮತ್ತು ಆ) ೧-೧-೧೯೮೮ ರವರೆಗೆ ಬಗರ್‌ಹುಕುಂ ಸಾಗುವಳಿಯಲ್ಲಿರುವ ಭೂಮಿಯ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕೊಡಲಾಗಿದೆ.

ಇ) ಹೌದು.

ಈ) ಈ ಜಮೀನು ಅರಣ್ಯ ಜಮೀನಾಗಿರುವುದರಿಂದ ಆ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುವುದು.

ANNEXURE

Statement showing the details of unauthorised encroachments of cultivation as on 1-1-1988.

		A G
1	Bangalore Rural	47687-35
2	Bangalore (Urban)	7495-22
3	Belgaum	996-02
4	Bellary	34,654-20
5	Bidar	8.773-39
6	Bijapur	1062-34
7	Chickmagalur	52,593-03
8	Chitradurga	57,139-04
9	Dakshina Kannada	86,729-10
10	Dharwad	7,695-22
11	Gulbarga	16,877-03
12	Hassan	81,338-26
13	Kodagu	8,263-10
14	Kolar	84,763 04
15	Mandya	18,360-08
16	Mysore	41,362-18
17	Raichur	13,386-12
18	Shimoga	45,707-35
19	Tumkur	82,452-13
20	Uttara Kannada	19,768-02
	Total	6,57,244-07

ENCROACHMENT OF AGRICULTURAL LAND 1-1-1988

Sl. No.	Name of the District	Total No. of persons. SC/S.T.	Total extent in acres & guntas.
1	Bangalore (Rural)	7285	10387.35
2	Bangalore (Uraban)	2610	4007.16
3	Belgaum	53	133.15
4	Bellary	5349	11734.35
5	Bidar	1700	5282.01
6	Bijapur	284	813.00
7	Chikkamagalore	4432	10805.05
8	Chitradurga	10448	22585.34
9	Dakshina Kannada	4712	4325.16
10	Dharwad	1110	2665.23
11	Gulbarga	3334	9271.00
12	Hassan	8510	17021.38
13	Kodagu	314	300.21
14	Kolar	16238	32338.34
15	Mandya	2312	3017.30
16	Mysore	5200	11659.40
17	Raichur	1850	5545.22
18	Shimoga	4565	9156.32
19	Tumkur	12342	23785.35
20	Uttara Kannada	88	229.15
	Total	92736	184568.07

ಸರ್ಕಾರ ರಚಿಸಿರುವ ವಿಚಾರಣಾ ಆಯೋಗಗಳು

೧೫. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧-೪-೧೯೮೭ ರಿಂದ ೩೧-೧೨-೧೯೮೯ರ ಅವಧಿಯಲ್ಲಿ ಸರ್ಕಾರದವರು ಯಾವ ಯಾವ ವಿಷಯಗಳ ವಿಚಾರಣೆಗಾಗಿ ಆಯೋಗಗಳನ್ನು ರಚಿಸಿದೆ.

ಆ) ಅವುಗಳಲ್ಲಿ ಎಷ್ಟು ಆಯೋಗಗಳು ಸರ್ಕಾರಕ್ಕೆ ಇದುವರೆವಿಗೆ ವರದಿ ಸಲ್ಲಿಸಿವೆ

ಇ) ವಿಚಾರಣಾ ಆಯೋಗಗಳ ವರದಿಯ ಮೇರೆಗೆ ತಪ್ಪಿತಸ್ಥರೆಂದು ತೀರ್ಮಾನಿಸಲಾದ ಅಧಿಕಾರಿಗಳ ಸಂಖ್ಯೆ ಎಷ್ಟು ? ಹಾಗೂ ಇನ್ನಿತರ ಸಂಖ್ಯೆ ಎಷ್ಟು ?